M – 2021

Register Number :

Subject Code : **22 (NS)**

# ECONOMICS

(Kannada and English Versions)

Time : 3 Hours 15 Minutes] [Total No. of questions : 51] [Max. Marks : 100

**(Kannada Version)**

**ಭಾಗ – ಎ**

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

**(5 × 1 = 5)**

1) ಒಂದು ಆರ್ಥಿಕತೆಯ ಕೊರತೆ ಸಂಪನ್ಮೂಲಗಳು

a) ಸ್ಪರ್ಧಾತ್ಮಕ ಬಳಕೆಯನ್ನು ಹೊಂದಿವೆ

b) ಏಕ ಬಳಕೆಯನ್ನು ಹೊಂದಿವೆ

c) ಅಪರಿಮಿತ ಬಳಕೆಯನ್ನು ಹೊಂದಿವೆ

d) ಮೇಲಿನ ಯಾವುದೂ ಇಲ್ಲ

2) ಬಜೆಟ್ ರೇಖೆಯ ಸಮೀಕರಣ

a) $PX + P_1X_1 = M$ b) $M = P_0X_0 + PX$

c) $P_1X_1 + P_2X_2 = M$ d) $Y = MX + C$

https://www.karnatakaboard.com

3) TC =

a) TVC b) TFC

c) TFC + TVC d) AC + MC

4) ಮಹಾ ಆರ್ಥಿಕ ಕುಸಿತದ ವರ್ಷ

a) 1920

b) 1889

c) 1929

d) 2018

5) NNP = GNP –

a) ಕಡಿತ b) ಸವಕಳಿ

c) ಹೂಡಿಕೆ d) ಮೇಲಿನ ಯಾವುದೂ ಅಲ್ಲ

II. ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿರಿ. **(5 × 1 = 5)**

6) ಕೇಂದ್ರೀಯ ಯೋಜಿತ ಆರ್ಥಿಕತೆಯಲ್ಲಿ ಎಲ್ಲಾ ಪ್ರಮುಖ ನಿರ್ಧಾರಗಳನ್ನು ________ ತೆಗೆದುಕೊಳ್ಳುತ್ತದೆ.

7) ಬಯಕೆಗಳನ್ನು ತೃಪ್ತಿಪಡಿಸುವ ಸರಕಿನ ಸಾಮರ್ಥ್ಯ ________

8) AVC ರೇಖೆಯ ________ ಬಿಂದುವಿನಲ್ಲಿ SMC ರೇಖೆಯು AVC ರೇಖೆಯನ್ನು ಕೆಳಗಿನಿಂದ ಛೇದಿಸುತ್ತದೆ.

9) $M_1$ ಮತ್ತು $M_2$ ಗಳನ್ನು ________ ಎಂದು ಕರೆಯುತ್ತೇವೆ.

10) ಗುಣಕದ ಗಾತ್ರವು ________ ನ ಮೌಲ್ಯವನ್ನು ಅವಲಂಬಿಸಿದೆ.



https://www.karnatakaboard.com

III. ಹೊಂದಿಸಿ ಬರೆಯಿರಿ. (5 × 1 = 5)

11)

| | A | | B |
|---|---|---|---|
| a) | ಬೇಡಿಕೆ ರೇಖೆ | i) | Y – C |
| b) | SMC | ii) | ರೇಪೊ |
| c) | ಗೃಹ ಕೃತ್ಯ | iii) | ಕೆಳಮುಖ ಇಳಿಜಾರು |
| d) | ಮರು ಖರೀದಿ ಒಪ್ಪಂದ | iv) | $\Delta TC/\Delta C$ |
| e) | ಉಳಿತಾಯ | v) | ಹಣರಹಿತ ವಿನಿಮಯ |

IV. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯ ಅಥವಾ **ಒಂದು** ಪದದಲ್ಲಿ ಉತ್ತರಿಸಿರಿ.

(5 × 1 = 5)

12) ಬೇಡಿಕೆ ಎಂದರೇನು?

13) ಸೀಮಾಂತ ಉತ್ಪನ್ನದ ಅರ್ಥವನ್ನು ನೀಡಿ.

14) ಮಧ್ಯಂತರ ಸರಕುಗಳ ಅರ್ಥ ನೀಡಿ.

15) ವಸ್ತು ವಿನಿಮಯ ಪದ್ಧತಿ ಎಂದರೇನು?

16) ಸೀಮಾಂತ ಅನುಭೋಗ ಪ್ರವೃತ್ತಿಯ (MPC)ಯ ಸೂತ್ರವನ್ನು ಬರೆಯಿರಿ.

## ಭಾಗ – ಬಿ

V. ಈ ಕೆಳಗಿನ **ಯಾವುದಾದರೂ ಒಂಭತ್ತು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 4 ವಾಕ್ಯಗಳಲ್ಲಿ ಉತ್ತರಿಸಿರಿ. (9 × 2 = 18)

17) ಒಂದು ಆರ್ಥಿಕತೆಯ ಕೇಂದ್ರೀಯ ಸಮಸ್ಯೆಗಳನ್ನು ತಿಳಿಸಿ.

18) ಕೆಳದರ್ಜೆಯ ಸರಕುಗಳೆಂದರೇನು? ಉದಾಹರಣೆ ಕೊಡಿ.

19) ಏಕತಾನಾತ್ಮಕ ಒಲವು ಎಂದರೇನು?

20) ಪ್ರತಿಫಲಗಳ ಪ್ರಮಾಣದ ವಿಧಗಳನ್ನು ತಿಳಿಸಿ.

https://www.karnatakaboard.com

21) ದೀರ್ಘಾವಧಿ ವೆಚ್ಚಗಳಾವುವು?

22) ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಒಂದು ಉದ್ಯಮ ಘಟಕವೊಂದು ಲಾಭವನ್ನು ಗಳಿಸಲು ಅಗತ್ಯವಿರುವ ಷರತ್ತುಗಳನ್ನು ತಿಳಿಸಿ.

23) ಸದಾವಕಾಶ ವೆಚ್ಚದ ಅರ್ಥವನ್ನು ಉದಾಹರಣೆ ಸಹಿತ ಬರೆಯಿರಿ.

24) ಬೆಲೆ ಪೂರೈಕೆ ಸ್ಥಿತಿಸ್ಥಾಪಕತ್ವದ ಅರ್ಥವನ್ನು ನೀಡಿ ಮತ್ತು ಅದರ ಸೂತ್ರವನ್ನು ಬರೆಯಿರಿ.

25) ನಾಲ್ಕು ಉತ್ಪಾದನಾಂಗಗಳಾವುವು? ಅವುಗಳ ಪ್ರತಿಫಲಗಳನ್ನು ತಿಳಿಸಿ.

26) ದಾಸ್ತಾನು ಮತ್ತು ಹರಿವಿನ ನಡುವಿನ ವ್ಯತ್ಯಾಸವನ್ನು ತಿಳಿಸಿ, ಉದಾಹರಣೆಯೊಂದಿಗೆ ವಿವರಿಸಿ.

27) ಅನುಭೋಗಿ ಸರಕುಗಳು ಮತ್ತು ಬಂಡವಾಳ ಸರಕುಗಳ ನಡುವಿನ ವ್ಯತ್ಯಾಸವೇನು?

28) ಹಣದ ಬೇಡಿಕೆಯ ಎರಡು ಉದ್ದೇಶಗಳನ್ನು ತಿಳಿಸಿ.

29) ಹೂಡಿಕೆ ಗುಣಕದ ಅರ್ಥವನ್ನು ನೀಡಿ ಮತ್ತು ಅದರ ಸೂತ್ರವನ್ನು ಬರೆಯಿರಿ.

30) ಮಿತವ್ಯಯದ ವಿರೋಧಾಭಾಸದ ಅರ್ಥವನ್ನು ನೀಡಿ.

## ಭಾಗ – ಸಿ

VI. ಈ ಕೆಳಗಿನ **ಯಾವುದಾದರೂ ಏಳು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **12** ವಾಕ್ಯಗಳಲ್ಲಿ ಉತ್ತರಿಸಿರಿ. **(7 × 4 = 28)**

31) ಕೇಂದ್ರೀಯ ಯೋಜಿತ ಆರ್ಥಿಕತೆಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

32) ಬಜೆಟ್ ಗಣವನ್ನು ರೇಖಾಚಿತ್ರದ ಸಹಾಯದಿಂದ ಸಂಕ್ಷಿಪ್ತವಾಗಿ ವಿವರಿಸಿರಿ.

33) ಬದಲೀ ಸರಕು ಮತ್ತು ಪೂರಕ ಸರಕುಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿರಿ.

p.t.o

https://www.karnatakaboard.com

34) ಒಟ್ಟು ಉತ್ಪನ್ನ, ಸರಾಸರಿ ಉತ್ಪನ್ನ ಮತ್ತು ಸೀಮಾಂತ ಉತ್ಪನ್ನಗಳನ್ನು ಉದಾಹರಣೆ ಸಹಿತ ವಿವರಿಸಿ.

35) ಪರಿಪೂರ್ಣ ಪೈಪೋಟಿ ಮಾರುಕಟ್ಟೆಯ ಲಕ್ಷಣಗಳನ್ನು ವಿವರಿಸಿ.

36) ಬಂಡವಾಳಶಾಹಿ ಆರ್ಥಿಕತೆಯ ಲಕ್ಷಣಗಳಾವುವು?

37) ಒಂದು ಆರ್ಥಿಕತೆಯ ವೃತ್ತಾಕಾರದ ಚಲನೆಯನ್ನು ವಿವರಿಸಿ.

38) ಬಾಹ್ಯತೆಗಳನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.

39) ಹಣದ ಶಾಸನಬದ್ಧ ವ್ಯಾಖ್ಯಾನಗಳನ್ನು ಕುರಿತು ಒಂದು ಟಿಪ್ಪಣಿ ಬರೆಯಿರಿ.

40) ಅನುಭೋಗ ಬಿಂಬಕವನ್ನು ಸಂಕ್ಷಿಪ್ತವಾಗಿ ವಿವರಿಸಿ.

41) ಹೂಡಿಕೆ ಬಿಂಬಕವನ್ನು ರೇಖಾನಕ್ಷೆ ಮೂಲಕ ವಿವರಿಸಿ.

## ಭಾಗ – ಡಿ

VII. ಈ ಕೆಳಗಿನ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ **20** ವಾಕ್ಯಗಳಲ್ಲಿ ಉತ್ತರಿಸಿರಿ. **(4 × 6 = 24)**

42) ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮವನ್ನು ಕೋಷ್ಟಕ ಮತ್ತು ರೇಖಾಚಿತ್ರದ ಸಹಾಯದಿಂದ ವಿವರಿಸಿ. https://www.karnatakaboard.com

43) ಅನುಭೋಗಿಯ ಆದರ್ಶ ಆಯ್ಕೆಯನ್ನು ರೇಖಾಚಿತ್ರದ ಸಹಾಯದಿಂದ ವಿವರಿಸಿ.

44) ವಿವಿಧ ಅಲ್ಪಾವಧಿ ವೆಚ್ಚಗಳನ್ನು ವಿವರಿಸಿ.

45) ಪರಿಪೂರ್ಣ ಪೈಪೋಟಿಯಲ್ಲಿ ಉದ್ಯಮ ಘಟಕವೊಂದರ ಒಟ್ಟು ಆದಾಯ ಮತ್ತು ಸರಾಸರಿ ಆದಾಯವನ್ನು ರೇಖಾಚಿತ್ರಗಳ ಸಹಾಯದಿಂದ ವಿವರಿಸಿ.

46) ಸಮಗ್ರ ಆರ್ಥಿಕ ಅನನ್ಯತೆಗಳನ್ನು ವಿವರಿಸಿ.

47) GDPಯನ್ನು ಲೆಕ್ಕಾಚಾರ ಮಾಡುವ ಎಲ್ಲಾ ಮೂರು ವಿಧಾನಗಳೂ ಒಂದೇ ಉತ್ತರವನ್ನು ನೀಡುತ್ತವೆಂಬುದನ್ನು ತೋರಿಸುವ ಒಂದು ಸಂಖ್ಯಾತ್ಮಕ ಉದಾಹರಣೆಯನ್ನು ವಿವರಿಸಿರಿ.

48) ಹಣದ ಕಾರ್ಯಗಳನ್ನು ವಿವರಿಸಿ, ಮತ್ತು ಹಣವು ಹೇಗೆ ಸಾಟಿ ವಿನಿಮಯ ಪದ್ಧತಿಯ ದೋಷಗಳನ್ನು ನಿವಾರಿಸಿತು ತಿಳಿಸಿ.

## ಭಾಗ – ಇ

VIII. ಈ ಕೆಳಗಿನ **ಯಾವುದಾದರೂ ಎರಡು** ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿರಿ. **(2 × 5 = 10)**

49) ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸುತ್ತಾಳೆ. ಬಾಳೆಹಣ್ಣಿನ ಬೆಲೆ ರೂ. 5 ಮತ್ತು ಮಾವಿನಹಣ್ಣಿನ ಬೆಲೆ ರೂ. 10 ಆಗಿದ್ದು, ಅನುಭೋಗಿಯ ಆದಾಯ ರೂ. 40 ಆಗಿದೆ. ಈ ಕೆಳಗಿನವುಗಳಿಗೆ ಉತ್ತರಿಸಿ.

a) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಬಾಳೆಹಣ್ಣನ್ನು ಅನುಭೋಗಿಸಬಹುದು?

b) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ ಮಾವಿನಹಣ್ಣನ್ನು ಅನುಭೋಗಿಸಬಹುದು?

c) ಬಜೆಟ್ ರೇಖೆಯ ಇಳಿಜಾರು ಕೆಳಮುಖ ಅಥವಾ ಮೇಲ್ಮುಖವಾಗಿರುತ್ತದೆಯೇ?

d) ಬಜೆಟ್ ರೇಖೆಯ ಮೇಲಿನ ಎಲ್ಲಾ ಸಂಯೋಜನೆಗಳು ಅನುಭೋಗಿಯ ಆದಾಯಕ್ಕೆ ಸಮನಾಗಿರುತ್ತವೆಯೇ ಅಥವಾ ಇಲ್ಲವೇ?

e) ಒಂದು ಬಾಳೆಹಣ್ಣನ್ನು ಹೆಚ್ಚುವರಿಯಾಗಿ ಪಡೆಯಲು ಮಾವಿನಹಣ್ಣನ್ನು ಬಿಟ್ಟು ಕೊಡಬೇಕಾಗುತ್ತದೆ. ಇದು ಸರಿಯೇ?

p.t.o

https://www.karnatakaboard.com

50) ಕೆಳಗೆ ನೀಡಿರುವ ಕೋಷ್ಟಕದಲ್ಲಿ ಸರಕಿನ ಪ್ರತಿ ಘಟಕದ ಮಾರುಕಟ್ಟೆ ಬೆಲೆ ರೂ. 10 ಇದ್ದಾಗ ಒಟ್ಟು ಆದಾಯ, ಸೀಮಾಂತ ಆದಾಯ ಮತ್ತು ಸರಾಸರಿ ಆದಾಯದ ಅನುಸೂಚಿಗಳ ಲೆಕ್ಕಾಚಾರ ಮಾಡಿ.

| ಮಾರಾಟದ ಪ್ರಮಾಣ | TR | MR | AR |
|---|---|---|---|
| 0 | | | |
| 1 | | | |
| 2 | | | |
| 3 | | | |
| 4 | | | |
| 5 | | | |
| 6 | | | |

(ಅಂಧ ವಿದ್ಯಾರ್ಥಿಗಳಿಗೆ ಮಾತ್ರ)

ಒಟ್ಟು ಆದಾಯ, ಸೀಮಾಂತ ಆದಾಯ ಮತ್ತು ಸರಾಸರಿ ಆದಾಯಗಳ ಅರ್ಥವನ್ನು ವಿವರಿಸಿ.

51) ಹಣದ ಅಮಾನ್ಯೀಕರಣ (ನೋಟು ರದ್ಧತಿ) ದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

**https://www.karnatakaboard.com**
**Whatsapp @ 9300930012**
**Send your old paper & get 10/-**
**अपने पुराने पेपर्स भेजे और 10 रूपये पायें,**
**Paytm or Google Pay से**

https://www.karnatakaboard.com